# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ

ದಿನಾಂಕ 27 ನೇ ಸೆಪ್ಟೆಂಬರ್ 2021 ನೇ ಇಸವಿ

ಕ್ರಿಮಿನಲ್ ಮೊಕದ್ದಮೆ ಕ್ರಮಾಂಕಃ 1374/2019

ರಾಜ್ಯ ಸರ್ಕಾರದ ಪರವಾಗಿ,
ಸಹಾಯಕ ಉಪ ನಿರೀಕ್ಷಕರು,
ಕಾರ್ಕಳ ನಗರ ಪೋಲೀಸ್ ಠಾಣೆ
ಕಾರ್ಕಳ, ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

- ವಿರುದ್ಧ -

ಹರೀಶ ಶೆಟ್ಟಿ
ಪ್ರಾಯಃ 40 ವರ್ಷ,
ತಂದೆಃ ಮಹಾಬಲ ಶೆಟ್ಟಿ
ವಾಸಃ ಮಂಜುಗೋಲಿ ಕೆಳಗಿನ ಮನೆ,
ಬೋರ್ಕಟ್ಟೆ ಅಂಚೆ, ಮಿಯ್ಯಾರು ಗ್ರಾಮ,
ಕಾರ್ಕಳ ತಾಲೂಕು. .... ಆರೋಪಿ.

## ದೋಷಾರೋಪಣೆ

ಶ್ರೀಮತಿ ಚೇತನ ಎಸ್. ಎಫ್, ಬಿ.ಎ., ಎಲ್‌ಎಲ್.ಬಿ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಆರೋಪಿಯಾದ ನೀವು ದಿಃ 23-02-2019 ರಂದು ಕಾರ್ಕಳ ನಗರ ಪೋಲೀಸ್ ಉಪ ನಿರೀಕ್ಷಕರು ಹಾಗೂ ಸಿಬ್ಬಂದಿಗಳೊಂದಿಗೆ ದಾಳಿ ನಡೆಸಿದಾಗ ಕಾರ್ಕಳ ತಾಲೂಕು ಕಸಬ ಗ್ರಾಮದ ಕಾರ್ಲ ಕಾಂಪ್ಲೆಕ್ಸ್ ಕಟ್ಟಡದಲ್ಲಿರುವ ವಿಜಯ ವೈನ್ ಶಾಪ್ ಬಳಿ ಯಾವುದೇ ಉದ್ದಿಮೆ ಪರವಾನಿಗೆ ಇಲ್ಲದ ಒಂದು ಕೋಣೆಯಲ್ಲಿ ತಮ್ಮ ಸ್ವಂತ ಲಾಭಕೋಸ್ಕರ ಯಾವುದೇ ಪರವಾನಿಗೆ ಇಲ್ಲದೇ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯ ವಿವರಣೆಯನ್ನು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಓದಿ ಹೇಳಿ, ವಿವರಿಸಿ ನಂತರ ಅವರು ನೀಡಿದ ಯಥಾವತ್ ಹೇಳಿಕೆಯನ್ನು ಬರೆದುಕೊಳ್ಳಲಾಯಿತು).

(ಚೇತನಾ ಎಸ್.ಎಫ್ )
ಪ್ರ ಸಿ ನ್ಯಾ ಮತ್ತು ಪ್ರ ದ ನ್ಯಾ ದಂ.,
ಕಾರ್ಕಳ.